## ನಿವೇದನೆ

# ವೈರಸ್ ಹೆಸರಿನಲ್ಲಿ ಆತಂಕ ಸೃಷ್ಟಿ ಸಮಾಜದ ಆರೋಗ್ಯಕ್ಕೆ ಹಾನಿಕರ

**ಸಾಧ್ಯತೆಗಳಲ್ಲ ಹುಸಿಯಾದ ಅನಿವಾರ್ಯ ಸಂದರ್ಭದಲ್ಲಿ ಕೊನೆಯ ಉಪಾಯವಾಗಿ ಲಾಕ್‌ಡೌನ್ ಜಾರಿಯಾಗುತ್ತದೆ. ಅಂಥ ಸಂದರ್ಭ ಸೃಷ್ಟಿಯಾಗುವ ಮೊದಲೇ ಲಾಕ್‌ಡೌನ್ ಜಪ ಮಾಡುವುದು ಧನಾತ್ಮಕ ದೃಷ್ಟಿಕೋನವಲ್ಲ, ಸಾಮಾಜಿಕ ಕಳಕಳಿಯ ಮಾದರಿಯೂ ಅಲ್ಲ.**

‘ವದಂತಿಗಳೆಂದರೆ ಜನರಿಗೆ ಇಷ್ಟ. ಅಸತ್ಯವಾದ ಸಂಗತಿಗಳ ಕುರಿತು ನಿರಂತರವಾಗಿ ಮಾತನಾಡುವುದರಲ್ಲಿ ಅವರಿಗೆ ಆಸಕ್ತಿ’ ಎನ್ನುವ ಅರ್ಥದ ಮಾತೊಂದಿದೆ. ಆ ಮಾತಿಗೆ ಉದಾಹರಣೆಯಂತೆ ಕೊರೊನಾ ಕಾಲಘಟ್ಟದ ಸಾರ್ವಜನಿಕ ಹಾಗೂ ಮಾಧ್ಯಮ ನಡವಳಿಕೆಗಳು ಕಾಣಿಸುತ್ತಿವೆ. ಲಾಕ್‌ಡೌನ್ ಕಾರಣದಿಂದಾಗಿ ಹಳಿತಪ್ಪಿದ್ದ ಬದುಕುಗಳು ಹಳಿಗೆ ಮರಳುವ ಪ್ರಯತ್ನದಲ್ಲಿರುವ ಸಂದರ್ಭದಲ್ಲೇ ಕೊರೊನಾ ಉಲ್ಬಣ ಮತ್ತು ಲಾಕ್‌ಡೌನ್ ಮರುಕಳಿಕೆಯ ಆತಂಕ ಹುಟ್ಟಿಸಲಾಗುತ್ತಿದೆ.

ಅಕ್ಟೋಬರ್–ನವೆಂಬರ್ ತಿಂಗಳಲ್ಲಿ ಕೊರೊನಾದ ಮೂರನೇ ಅಲೆ ಭಾರತದಲ್ಲಿ ಕಾಣಿಸಿಕೊಳ್ಳಬಹುದೆನ್ನುವ ನಿರೀಕ್ಷೆ ಹುಸಿಯಾಗಿ ಜನಸಾಮಾನ್ಯರು ನೆಮ್ಮದಿಯ ಉಸಿರುಬಿಟ್ಟಿದ್ದರು. ಒಂದೂವರೆ ವರ್ಷಕ್ಕೂ ಹೆಚ್ಚು ಕಾಲ ಮುಚ್ಚಿದ್ದ ವಿದ್ಯಾಸಂಸ್ಥೆಗಳ ಬಾಗಿಲು ತೆರೆದು, ಮಕ್ಕಳು ಹೊಸ ಉತ್ಸಾಹದಿಂದ ಶಾಲೆಗಳಿಗೆ ಬರತೊಡಗಿದ್ದಾರೆ. ಉದ್ಯೋಗ ಕಳೆದುಕೊಂಡವರು, ಆದಾಯ ಕಡಿತಗೊಂಡವರು ಹೊಸ ಸಾಧ್ಯತೆಗಳ ಹುಡುಕಾಟದಲ್ಲಿದ್ದಾರೆ. ಈ ಸಂಕ್ರಮಣ ಸಂದರ್ಭದಲ್ಲಿ ಓಮೈಕ್ರಾನ್ ರೂಪದಲ್ಲಿ ಕೊರೊನಾ ಮತ್ತೆ ಕಾಣಿಸಿಕೊಂಡಿದೆ.

ಕೊರೊನಾ ವೈರಾಣುವಿನ ರೂಪಾಂತರ ನಿರೀಕ್ಷಿತವಾದುದು. ಆದರೆ, ಇದಕ್ಕೆ ಕೆಲವರು ಸ್ಪಂದಿಸುತ್ತಿರುವ ಮನಸ್ಥಿತಿ ವಿಚಿತ್ರವಾದುದು. ಕೊರೊನಾದ ಮೊದಲೆರಡು ಅಲೆಗಳ ಸಂದರ್ಭದಲ್ಲಿದ್ದ ಪರಿಸ್ಥಿತಿ ಈಗಿಲ್ಲ. ರೋಗತೀವ್ರತೆಯ ಸಂದರ್ಭದಲ್ಲಿ ನಡೆದುಕೊಳ್ಳಬೇಕಾದ ರೀತಿ, ವಹಿಸಬೇಕಾದ ಎಚ್ಚರಿಕೆ ನಮಗೆ ತಿಳಿದಿದೆ. ದೇಶದ ಕೋಟ್ಯಂತರ ಜನ ವ್ಯಾಕ್ಸಿನ್‌ನ ಎರಡು ಡೋಸ್ ಪಡೆದಿರುವ ಆತ್ಮವಿಶ್ವಾಸವೂ ನಮ್ಮೊಂದಿಗಿದೆ. ಬದಲಾಗಿರುವ ಈ ಸಂದರ್ಭ ಕೊರೊನಾ ವೈರಾಣುವನ್ನು ಹಿಂದೆಂದಿಗಿಂತಲೂ ಹೆಚ್ಚು ಸಮರ್ಥವಾಗಿ ಎದುರಿಸುವ ಸಾಧ್ಯತೆಯನ್ನು ನಮ್ಮ ಮುಂದಿರಿಸಿದೆ. ಆದರೆ, ಇದೆಲ್ಲ ಸಾಧ್ಯತೆಯನ್ನು ಮರೆತವರಂತೆ ಕೆಲವರು ಹುಯಿಲೆಬ್ಬಿಸುವ ಮೂಲಕ ಸಮಾಜದಲ್ಲಿ ಆತಂಕ ಸೃಷ್ಟಿಸುತ್ತಿದ್ದಾರೆ.

ಕೊರೊನಾದ ಸಂಭಾವ್ಯ ಮೂರನೇ ಅಲೆಯ ಬಗ್ಗೆ ಕೆಲವರು ಎಬ್ಬಿಸುತ್ತಿರುವ ಊಹಾಪೋಹ ಜನಸಾಮಾನ್ಯರ ಮನಸ್ಸನ್ನು ಕ್ಷೋಭೆಗೊಳಿಸುವಂತಹದ್ದು. ಇವರು ಬಿತ್ತರಿಸುತ್ತಿರುವ ಸುದ್ದಿಗಳನ್ನು ನೋಡಿದರೆ, ಕೊರೊನಾ ಹಾಗೂ ಅದರ ಕಾರಣದಿಂದಾಗಿ ಜಾರಿಗೊಳಿಸಬೇಕಾದ ಲಾಕ್‌ಡೌನ್‌ಗಾಗಿ ‘ಸುದ್ದಿಕರ್ತರು’ ಹಂಬಲಿಸುತ್ತಿರುವಂತೆ ಕಾಣಿಸುತ್ತದೆ. ಕಠಿಣ ನಿರ್ಬಂಧಗಳ ಸಮಯದಲ್ಲಿ ನಾಗರಿಕರು ಅನುಭವಿಸಿದ ಪಡಿಪಾಟಲುಗಳನ್ನು ನೋಡಿದವರು ಲಾಕ್‌ಡೌನ್ ಕುರಿತು ಬೀಸುಹೇಳಿಕೆಗಳನ್ನು ನೀಡಲಾರರು. ಆದರೆ, ಲಾಕ್‌ಡೌನ್ ಸಾಧ್ಯತೆಗಳ ಬಗ್ಗೆ ಮಾತನಾಡುತ್ತಿರುವವರನ್ನು ನೋಡಿದರೆ ಅವರು ಸಂವೇದನೆಯನ್ನು ಕಳೆದುಕೊಂಡಿರುವಂತೆ ಕಾಣಿಸುತ್ತದೆ. ಸುದ್ದಿ ನಿರೂಪಣೆಗೆ ಬೇಕಾದುದು ವಸ್ತುನಿಷ್ಠತೆ ಹಾಗೂ ನಿರ್ಲಿಪ್ತ ಗುಣವೇ ಹೊರತು ಉತ್ಪ್ರೇಕ್ಷೆ ಹಾಗೂ ಉನ್ಮಾದವಲ್ಲ. ಉತ್ಪ್ರೇಕ್ಷಿತ ವಾಸ್ತವ ಕೂಡ ಒಂದು ಬಗೆಯ ವದಂತಿಯೇ ಎನ್ನುವ ಅರಿವು ಮಾಧ್ಯಮದ ಹಣೆಪಟ್ಟಿ ಹಚ್ಚಿಕೊಂಡಿರುವವರಿಗೆ ಬೇಕು.

ಸ್ಮಾರ್ಟ್ ಫೋನ್ ಹೊಂದಿರುವ ಪ್ರತಿಯೊಬ್ಬರೂ ಪತ್ರಕರ್ತರಾಗಿರುವ ದಿನಗಳಿವು. ಸುದ್ದಿಗಳನ್ನು ಹುಟ್ಟುಹಾಕುವಲ್ಲಿ ಎಲ್ಲರಿಗೂ ಆಸಕ್ತಿ. ಮಾಹಿತಿಯ ಸತ್ಯಾಸತ್ಯತೆಯ ಬಗ್ಗೆ ಕುತೂಹಲ ಕಡಿಮೆ. ಸಾಮಾಜಿಕ ಮಾಧ್ಯಮಗಳು ಕೂಡ ಸುಳ್ಳು ಸುದ್ದಿಗಳನ್ನು ಹರಡಲು ಪೂರಕವಾಗಿವೆ. ಸಾಮಾಜಿಕ ಮಾಧ್ಯಮಗಳು ಮಾತ್ರವಲ್ಲ, ‘ವೃತ್ತಿಪರ’ ಎಂದು ಹೇಳಿಕೊಳ್ಳುವ ಸುದ್ದಿ ವಾಹಿನಿಗಳೇ ಊಹೆಗಳನ್ನು ಸುದ್ದಿಯ ರೂಪದಲ್ಲಿ ಪ್ರಸಾರ ಮಾಡುವ ಮಟ್ಟಿಗೆ ವೈಚಾರಿಕ ದಿವಾಳಿತನವನ್ನು ಎಗ್ಗಿಲ್ಲದೆ ಪ್ರದರ್ಶಿಸುತ್ತಿವೆ. ಸುದ್ದಿಯು ವರ್ಣರಂಜಿತವಾದಾಗ, ಉತ್ಪ್ರೇಕ್ಷೆಯಿಂದ ಕೂಡಿದಾಗ ಅಥವಾ ತಿರುಚಿದಾದ ಅದು ತನ್ನ ಮೌಲ್ಯವನ್ನು ಕಳೆದುಕೊಳ್ಳುತ್ತದೆ. ಜನರಿಗೆ ಮಾಹಿತಿಯಾಗಿ ತಲುಪಬೇಕಾದ ಸಂಗತಿ, ಆತಂಕವನ್ನು ಹುಟ್ಟಿಸುವ ‘ಬ್ರೇಕಿಂಗ್ ನ್ಯೂಸ್’ ಆಗುತ್ತಿದೆ. ಬ್ರೇಕಿಂಗ್ ನ್ಯೂಸ್ ಎನ್ನುವ ಪದಪ್ರಯೋಗದಲ್ಲೇ ನೋಡುಗನ–ಕೇಳುಗನ ಎದೆಬಡಿತ ಹೆಚ್ಚಿಸುವ ಉದ್ದೇಶವಿದೆ.

ಕೊರೊನಾದ ಮೂರನೇ ಅಥವಾ ನಾಲ್ಕನೇ ಅಲೆ ಎದುರಾಗುವ ಸಂಭವವಿಲ್ಲ ಎಂದು ಯಾರೂ ಹೇಳಲಾರರು. ಕೊರೊನಾದೊಂದಿಗೆ ಹೊಂದಿಕೊಂಡು ಹೋಗುವುದು, ಬಾಳುವುದು ಅನಿವಾರ್ಯ ಎನ್ನುವ ಸತ್ಯವನ್ನು ಜಗತ್ತು ಒಪ್ಪಿಕೊಂಡಿದೆ. ಕೊರೊನಾದ ಮರುಕಳಿಕೆ ಎಂದರೆ ಲಾಕ್‌ಡೌನ್‌ನ ಮರುಕಳಿಕೆ ಎನ್ನುವ ವಿಚಾರದಿಂದ ನಾವು ಹೊರಬರಬೇಕಾಗಿದೆ. ಸಾಧ್ಯತೆಗಳಲ್ಲ ಹುಸಿಯಾದ ಅನಿವಾರ್ಯ ಸಂದರ್ಭದಲ್ಲಿ ಕೊನೆಯ ಉಪಾಯವಾಗಿ ಲಾಕ್‌ಡೌನ್ ಜಾರಿಯಾಗುತ್ತದೆ. ಅಂಥ ಸಂದರ್ಭ ಸೃಷ್ಟಿಯಾಗುವ ಮೊದಲೇ ಲಾಕ್‌ಡೌನ್ ಜಪ ಮಾಡತೊಡಗುವುದು ಧನಾತ್ಮಕ ದೃಷ್ಟಿಕೋನವಲ್ಲ, ಸಾಮಾಜಿಕ ಕಳಕಳಿಯ ಮಾದರಿಯೂ ಅಲ್ಲ. ವೈರಾಣು ಉಗ್ರರೂಪ ತಾಳಿದ ಸಂದರ್ಭದಲ್ಲಿ ಆತಂಕ ಸೃಷ್ಟಿಯಾಗುವುದು ಸಹಜ; ವೈರಸ್ ಹೆಸರಿನಲ್ಲಿ ಸಮಾಜವೇ ಆತಂಕ ಸೃಷ್ಟಿಸುವುದು ಅಸಹಜ ಹಾಗೂ ಅನಾರೋಗ್ಯಕರ. ಕೊರೊನಾ ವಿರುದ್ಧದ ಹೋರಾಟದಲ್ಲಿ ಧನಾತ್ಮಕ ದೃಷ್ಟಿಕೋನವನ್ನು ಪಸರಿಸುವ ಕೆಲಸ ಆಂದೋಲನದ ರೂಪದಲ್ಲಿ ನಡೆಯಬೇಕಾಗಿದೆ.

■ ರಘುನಾಥ ಚ.ಹ.



ಈಶ್ವರ್